

ಜನಸಂಖ್ಯೆ ಅಂದಾಜು ಎರಡು ಮೂರು ಲಕ್ಷ ಇರಬಹುದು. ಈ ಸಮುದಾಯದ ಮಕ್ಕಳಿಗೆ ಶಿಕ್ಷಣದ ಅರಿವು, ಅದರ ಪ್ರಾಮುಖ್ಯತೆ, ಕಾಲಕ್ಕೆ ತಕ್ಕ ಬದಲಾವಣೆಯಾಗುವ ವಿಚಾರ ಬಂದರೆ ಮುಂದಿನ ತಲೆಮಾರಿಗೆ ಏನಾದ್ರೂ ಬದಲಾವಣೆ ಆಗಬಹುದೋ ಏನೋ... ಕೆಲವು ಒಳ್ಳೆಯ ಸಂಪ್ರದಾಯಗಳು, ಮಾನವೀಯ ನಡೆಗಳು ನಮ್ಮಲ್ಲಿವೆ. ಆದರೆ ಯಾವ ವಿಚಾರಗಳನ್ನು ಇಂದು ಪಾಲಿಸಬೇಕು, ಯಾವ ವಿಚಾರಗಳನ್ನ ಕೈ ಬಿಡಬೇಕು ಎನ್ನುವ ಪ್ರಜ್ಞೆ ಬರಬೇಕಾಗಿದೆ.

**◆ ದಂಡದಿಂದ ವಸೂಲಾದ ಹಣವನ್ನು ಏನು ಮಾಡ್ತಾರೆ?**

ಹಿಂಗ ಬಂದ ಹಣಾನ ದೈವಕ್ಕೆ ಬ್ಯಾಟಿ ಹಾಕೋದು ಅಂತ ಮಾಡ್ತಾರ, ಕುಡಿದು ತಿಂದು ಖರ್ಚು ಮಾಡ್ತಾರ. ಇನ್ನೂ ಉಳಿದರೆ ಸಮಾಜದ ಫಂಡ್ ಅಂತ ಇಟ್ಟು ಬಡ್ಡಿಸಾಲ ಕೊಡ್ತಾರ... ಇದೆಲ್ಲ ಎಷ್ಟು ಪ್ರಾಮಾಣಿಕವಾಗಿ ಲೆಕ್ಕ ಇಡ್ತಾರೋ ಏನೋ ಯಾರಿಗೆ ಗೊತ್ತು? ತಿಮಿಂಗಿಲಗಳು ಸಣ್ಣಸಣ್ಣ ಮೀನು ತಿಂದು ಬದುಕ್ತಾವ ಅಂತಾರಲ್ಲ, ಹಾಗಿದು. ಕೆಲವು ಊರಿನ ಜನ ಈ ಮಾತಿಗೆ ಅಪವಾದವಾಗಿರಬಹುದು.

**◆ ಆದ್ರೆ ನಿಮ್ಮ ಕಾಲಕ್ಕೂ, ಇವತ್ತಿಗೂ ಶಿಕ್ಷಣದ ಕಾರಣದಿಂದ ಬದಲಾವಣೆ ಆಗಿದೆ ಅಲ್ವಾ?**

ಬಹಳ ಏನಿಲ್ರಿ. ಆಗ ವರ್ಷದಲ್ಲಿ ಹನ್ನೊಂದು ತಿಂಗಳು ಹೊಟ್ಟೆ ತುಂಬಿಸಾಕ ಊರೂರು ತಿರುಗ್ತಾ ಇದ್ವಿ. ಎರಡು ದಿನ ಒಂದೂರಲ್ಲಿ, ಮತ್ತೆ ಮುಂದಲೂರಿಗೆ. ಪತ್ರ ಬರೆಯೋಕೆ ವಿಳಾಸ ಇದ್ದಿಲ್ಲ. ಕಳೆದ ಮೂವತ್ತು ವರ್ಷದಿಂದ ಪರಿಸ್ಥಿತಿ ಸ್ವಲ್ಪ ಬದಲಾವಣೆ ಆಗ್ಯದ. ಹತ್ತು ಪರ್ಸೆಂಟ್ ಈ ತರಹದ ಅಲೆಮಾರಿ ಜನರನ್ನ ಬಿಟ್ಟರೆ, ಈಗ, ಒಂದು ಕೆಲಸ ಅಂತ ಹಿಡಿದು ವರ್ಷ ಇಡೀ ಒಂದೂರಲ್ಲಿ ಇರ್ತಾರ. ಅಷ್ಟರಮಟ್ಟಿಗೆ ಕೆಲವರಿಗಾದ್ರೂ